ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

ಸಿ.ಸಿ. 377/2019

ಡಿ ಡಬ್ಲ್ಯೂ-1

ದಿಃ **17.01.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ನಾರಾಯಣ |
| ಗಂಡ/ತಂದೆಯ ಹೆಸರು | ಸಿದ್ದರಾಮ ನಾಯಕ |
| ವಯಸ್ಸು | 65 ವರ್ಷ |
| ಕೆಲಸ | ನಿವೃತ್ತ ಮೆಕ್ಯಾನಿಕಲ್ ಟೆಕ್ನಿಷಿಯನ್ |
| ವಾಸಸ್ಥಳ | ಚೋಳೇನಹಳ್ಳಿ |

**ಮುಖ್ಯ ವಿಚಾರಣೆ ಆರೋಪಿ ಪರ ಶ್ರೀಮತಿ ಕೆ ಎಸ್ ವಕೀಲರಿಂದಃ**

ಮುಂಚೆ ನಾನು ಬ್ಯಾಂಕ್ ಗೆ ಹೋಗುತ್ತಿರಲಿಲ್ಲ, ನನ್ನ ವ್ಯವಹಾರಗಳನ್ನು ಫಿರ್ಯಾದಿ ಮತ್ತು ಅವರ ತಂದೆ ನೋಡಿಕೊಳ್ಳುತ್ತಿದ್ದರು. ಬ್ಯಾಂಕ್ ವ್ಯವಹಾರವೆಂದರೆ ನನಗೆ ದುಡ್ಡನ್ನು ತೆಗೆದುಕೊಡುವುದು, ದುಡ್ಡನ್ನು ಜಮಾ ಮಾಡುವುದು, ನನ್ನ ಚೆಕ್ಕನ್ನು ಪಡೆದು ಬ್ಯಾಂಕ್ ಗೆ ನೀಡುತ್ತಿದ್ದರು. ನಾನು ಫಿರ್ಯಾದಿಯಿಂದ ಯಾವುದೇ ಸಾಲವನ್ನು ಪಡೆದಿಲ್ಲ. ಫಿರ್ಯಾದಿಯೇ ನನಗೆ 10 ಲಕ್ಷ ರೂ.ಗಳನ್ನು ನೀಡಬೇಕು. ನಾನು ಅವರಿಗೆ ಕಾನೂನು ತಿಳುವಳಿಕೆ ನೋಟಿಸ್ಸನ್ನು ಕಳುಹಿಸಿರುತ್ತೇನೆ. ನಾನು ಫಿರ್ಯಾದಿ ನನ್ನಿಂದ ಹಣವನ್ನು ಪಡೆದ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ಅದನ್ನು ಈಗಾಗಲೇ ನಿಡಿ1 ಎಂದು ಗುರುತಿಸಲಾಗಿದೆ. ನಿಡಿ1ನ್ನು ಸಾಕ್ಷಿ ನೋಡಿ ಫಿರ್ಯಾದಿ ತಂದೆಯಾದ ಕೃಷ್ಣೇಗೌಡರವರು ಸಹಿ ಹಾಕಿರುತ್ತಾರೆ. ಫಿರ್ಯಾದಿ ಸಹ ನಿಡಿ1ರ ಮೇಲೆ ಸಹಿಯನ್ನು ಹಾಕಿರುತ್ತಾರೆ. ಅವರ ಸಹಿಗಳನ್ನು ಈಗಾಗಲೇ ನಿಡಿ1(ಎ) ಮತ್ತು 1(ಬಿ) ಎಂದು ಗುರುತಿಸಲಾಗಿದೆ. ಫಿರ್ಯಾದಿ ನನ್ನ ಮೇಲೆ ಸುಳ್ಳು ಪ್ರಕರಣವನ್ನು ಹೂಡಿದ್ದಾರೆ. ನಾನು ಅವರಿಂದ ಯಾವುದೇ ಸಾಲವನ್ನು ಪಡೆದಿರುವುದಿಲ್ಲ.

**ಪಾಟೀಸವಾಲು ಫಿರ್ಯಾದಿ ಪರ ವಕೀಲರಿಂದಃ**

ವಕೀಲರ ಕೋರಿಕೆ ಮೇರೆಗೆ ಸಮಯಾವಕಾಶ ನೀಡಿ ಪಾಟೀಸವಾಲನ್ನು ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

**ಓ.ಹೇ.ಕೇ.ಸ.ಇದೆ.**

ಒಂದನೇ ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಹುಣಸೂರು.